4.	ಟಿ.ಆರ್. ಚಂದ್ರಶೇಖರ್ ಜೆ-39, 3ನೇ ಅಡ್ಡರಸ್ತೆ, ಒಂದನೇ ಮುಖ್ಯರಸ್ತೆ, ಲಕ್ಷ್ಮೀನಾರಾಯಣಪುರ, ಬೆಂಗಳೂರು-21.	317	25-5-86	-
5.	ವಿ. ಗೋವಿಂದರಾಜು, ನಂ: 41, ಎ.ಡಿ. ಸ್ಲಾಕ್ 4ನೇ ಮುಖ್ಯರಸ್ತೆ ಶ್ರೀರಾಮಪುರ, ಬೆಂಗಳೂರು-21.	318	9-1-87	ಕಲಬೆರಕೆ ಕಾರಣಗಳಿಗೆ ದಿನಾಂಕ 13-3-93 ರಂದು ರಿಯಾಯಿತಿ ದಾರಿಕೆಯನ್ನು ರದ್ದು ಪಡಿಸಲಾಗಿದೆ.
6.	ಎಸ್.ಸಿ. ಧನಂಜಯ, 30:1, 4ನೇ ಕ್ರಾಸ್, ಹೊಸಪಳ್ಳಿ, ಪೈಪ್ಲೈನ್, ಮಾಗಡಿರೋಡ್ (ಅಂಚೆ) ಬೆಂಗಳೂರು-23.	318		ದಿನಾಂಕ 13-3-93 ರಂದು ಬೂತನ್ನು ವಹಿಸಿಕೊಡಲಾಯಿತು. ಕಲಬೆರಕೆ ಕಾರಣ ಗಳಿಗಾಗಿ ದಿನಾಂಕ: 31-1-94ರಂದು ರಿಯಾಯಿತಿದಾರಿಕೆ ಯನ್ನು ರದ್ದು ಪಡಿಸಲಾಗಿದೆ.
7.	ಕೆ. ನಟರಾಜ್, ತಂದೆ, ಬಿ. ಕೆಂಪಯ್ಯ, 1721:8, 3ನೇ ಮುಖ್ಯರಸ್ತೆ ರಾಮಮೋಹನಪುರ, ಶ್ರೀರಾಮಪುರ, ಬೆಂಗಳೂರು-21.	318		ದಿನಾಂಕ:31-1-94 ರಂದು ಬೂತನ್ನು ವಹಿಸಲಾಗಿದೆ.

ಬೆಳಗಾಂ ತಾಲ್ಲೂಕು ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಿಗೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು

375-ಶ್ರೀ ಕೆ. ಮೂಡಗೇಕರ್ ದೇಸಾಯಿ (ಬಾಗೇವಾಡಿ); ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕು,ಸೂಳೇಭಾವಿ ಮತ್ತು ಬಾಡಾ ಗ್ರಾಮಗಳಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬೆಳಗಾಂ ತಾಲ್ಲೂಕಿನ ಈ ಗ್ರಾಮಗಳಿಗೆ 1994-95ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ಪ್ರಾರಂಭಿಸಲು ಸರ್ಕಾರವು ತಕ್ಷಣ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್. ಎಂ. ಯಾಹ್ಯಾ (ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು):

ಅ) ಬಂದಿದೆ.

ಅ) ಇಲ್ಲ.

ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರು

388-ಶ್ರೀ ಕೆ.ಸಿ. ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವೃತ್ತಿ ಶಿಕ್ಷಣ ಇಲಾಖೆಯಲ್ಲಿ ಸೇವೆ ನಿರ್ವಹಿಸುತ್ತಿರುವ ನೌಕರರನ್ನು ಸರ್ಕಾರಿ ಸೇವೆ ರೀತ್ಯಾ ಸಕ್ರಮಗೊಳಿಸುವುದು ಸರ್ಕಾರದ ನೀತಿಯಲ್ಲವೆ?

ಆ) ಹಾಗಿದ್ದಲ್ಲಿ, ವೃತ್ತಿ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು ರೂಪಿಸಲು ಮತ್ತು ಮಂಜೂರಾತಿ ನೀಡಲು ಎಷ್ಟು ಸಮಯಬೇಕಾಗುವುದು?

ಇ) ಹಾಗಿದ್ದಲ್ಲಿ, 82 ಮಂದಿ ಪೂರ್ಣಕಾಲಿಕ ವೇತನ ಶ್ರೇಣಿಯ ಮತ್ತು 108 ಸಂಚಿತ ವೇತನ ಶ್ರೇಣಿಯಲ್ಲಿ ಸಕ್ರಮ ಗೊಳಿಸಲು ಸರ್ಕಾರಕ್ಕೆ ಭರಿಸುವ ಆರ್ಥಿಕ ಹೊರೆ ಎಷ್ಟು?

ಶ್ರೀ ಪ್ರಭಾಕರ ಎಸ್. ರಾಣೆ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು):

ಅ) ಪ್ರಸ್ತಾವನೆ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ತಜ್ಞರಿಂದ ವೃಂದ ಮತ್ತು ನೇಮಕಾತಿ ಪರಿಶೀಲನಾ ಸಮಿತಿ ಸಭೆ ಕರೆದು ಚರ್ಚಿಸಲಾಗುವುದು ಹಾಗೂ ಇತರೆ ಇಲಾಖೆ ಅಂದರೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಹಣಕಾಸು ಇಲಾಖೆ; ಕಾನೂನು ಇಲಾಖೆಯೊಂದಿಗೆ ಸಮಾಲೋಚಿಸಲು ಸಮಯಬೇಕಾಗುವುದರಿಂದ ಆದ್ಯತೆ ಮೇರೆಗೆ ಕ್ರಮ ಜರುಗಿಸಲಾಗುವುದು.

	ಸಕ್ರಮಗೊಳಿಸಿದ್ದಲ್ಲಿ ಸರ್ಕಾರಕ್ಕೆ ತಗಲುವ ಹೊರೆ (ಲಕ್ಷ ರೂ.ಗಳಲ್ಲಿ)
1) ಪೂರ್ಣಕಾಲಿಕ ವೇತನದಲ್ಲಿರುವ ನೌಕರರು-73	34.04
2) ಸಂಚಿತ ವೇತನ ರೂಪದಲ್ಲಿರುವ ನೌಕರರು-68	30.15
ಒಟ್ಟು	64.19

ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾಲಯ

376-ಶ್ರೀ ಮೊಡಗೇಕರ್ ದೇಸಾಯಿ (ಬಾಗೇವಾಡಿ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ತಾಲ್ಲೂಕಿನ ತಾರಿಹಾಳ ಮತ್ತು ಕಟ್ಟಿ ಗ್ರಾಮಗಳಿಗೆ ಜರೂರಾಗಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಪ್ರಾಥಮಿಕ : ಪಶುಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು.